ಅರಣ್ಯ ಇಲಾಖೆ

# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ

ದೂರವಾಣಿ:08265–221266 ಇ–ಮೇಲ್:–*dcfkoppa@gmail.com*

ಸಂಖ್ಯೆ:ಟಿಬಿಆರ್:ಕಟ್ಟಡ:ಸಿಆರ್:09/2019–20 ದಿನಾಂಕ:15–07–2019.

## –: ಸಂಕ್ಷಿಪ್ತ ಟೆಂಡರ್ ಪ್ರಕಟಣೆ :–

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2019–20ನೇ ಸಾಲಿಗೆ ಕೊಪ್ಪ ವಿಭಾಗದ ಕೆಳಕಂಡ ವಲಯಗಳಲ್ಲಿ ಅನುಸೂಚಿಯಲ್ಲಿ ನಮೂದಿಸಿರುವ ಪ್ರದೇಶಗಳಲ್ಲಿ ನಿರ್ವಹಿಸಬೇಕಾದ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು **ದ್ವಿ–ಲಕೋಟೆ ಪದ್ದತಿಯಲ್ಲಿ** (ತಾಂತ್ರಿಕ ಮತ್ತು ಆರ್ಥಿಕ) ಮೊಹರಾದ ಟೆಂಡರ್‌ಗಳನ್ನು ದಿನಾಂಕ: **29–07–2019** ರಂದು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಕರೆಯಲಾಗಿದೆ. ಸದರಿ ದಿನದಂದು ಟೆಂಡರ್ ಫಾರಂ ಬೆಲೆ ಮತ್ತು ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳನ್ನು ಪಾವತಿಸಿ ಈ ಕಛೇರಿಯಲ್ಲಿ ದಿನಾಂಕ: 29–07–2019 ರಂದು ಬೆಳಿಗ್ಗೆ 10:00 ಗಂಟೆ ಯಿಂದ ಮಧ್ಯಾಹ್ನ 1:00 ರವರೆಗೆ ಟೆಂಡರ್ ಫಾರಂಗಳನ್ನು ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಲಾದ ಟೆಂಡರ್ ಫಾರಂಗಳನ್ನು ಸದರಿ ದಿನದಂದು ಮಧ್ಯಾಹ್ನ 3:00 ಗಂಟೆಯ ಒಳಗಾಗಿ ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು. ಈ ರೀತಿ ಸ್ವೀಕರಿಸಲಾದ ಟೆಂಡರ್‌ಗಳನ್ನು ಮಧ್ಯಾಹ್ನ 4:00 ಗಂಟೆಗೆ ಹಾಜರಿರಿರುವ ಎಲ್ಲಾ ಅರಣ್ಯ ಗುತ್ತಿಗೆದಾರರ ಸಮಕ್ಷಮದಲ್ಲಿ ಈ ಕೆಳಸಹಿ ಮಾಡಿರುವ ಅಧಿಕಾರಿಗಳು ಅಥವಾ ಅವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ಅಧಿಕಾರಿಗಳಿಂದ ಟೆಂಡರ್ ಲಕೋಟೆಯನ್ನು ತೆರೆಯಲಾಗುವುದು. ಒಂದು ವೇಳೆ ಟೆಂಡರ್ ದಿನಾಂಕವು ಸಾರ್ವಜನಿಕ ರಜೆಯೆಂದು ಘೋಷಿತವಾದಲ್ಲಿ ಮುಂದಿನ ಕಛೇರಿಯ ಕೆಲಸದ ದಿನದಂದು ಟೆಂಡರ್‌ನ್ನು ಸ್ವೀಕರಿಸಿ ಅದೇ ಸಮಯಕ್ಕೆ ತೆರೆಯಲಾಗುವುದು.

ದಿನಾಂಕ: **29–07–2019** ರಂದು ನಡೆಯುವ ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇದ್ದಲ್ಲಿ ಇದೇ ಕೆಲಸಗಳಿಗೆ ದಿನಾಂಕ: **31–07–2019** ರಂದು ಮರುಟೆಂಡರನ್ನು ಕರೆಯಲಾಗಿದೆ. ಸದರಿ ದಿನದಂದು ಮೇಲ್ಕಂಡ ಸಮಯದಂತೆ ಮರು ಟೆಂಡರ್ ನೆಡೆಸಲಾಗುವುದು. ಒಂದುವೇಳೆ ದಿನಾಂಕ: **29–07–2019** ರಂದು ನಡೆಯುವ ಟೆಂಡರ್‌ನಲ್ಲಿ ಯಾರಾದರೂ ಭಾಗವಹಿಸಿ ಟೆಂಡರ್ ಹಾಕಿ ಅಂಗೀಕೃತವಾದಲ್ಲಿ ಮರುಟೆಂಡರ್ ಪ್ರಕ್ರಿಯೆಯು ತಾನಾಗಿಯೇ ರದ್ದಾಗುತ್ತದೆ ಎಂದು ಭಾವಿಸತಕ್ಕದ್ದು.

**ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿದ ಯೂನಿಟ್ ಸಂಖ್ಯೆಗಳ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ**

## –: ಅನುಸೂಚಿ :–

| ಯೂನಿಟ್ ಸಂ. | ವಲಯದ ಹೆಸರು | ಯೋಜನೆ | ಕಾಮಗಾರಿ ನಿರ್ವಹಿಸಬೇಕಾದ ಸ್ಥಳ/ ಕಾಮಗಾರಿಯ ವಿವರ | ಟೆಂಡರ್‌ಗೆ ಇಟ್ಟಿರುವ ಕೆಲಸದ ಅಂದಾಜು ಮೊತ್ತ | ಟೆಂಡರ್ ಜೊತೆಗೆ ಪಾವತಿಸ ಬೇಕಾದ ಇ.ಎಂ.ಡಿ. ಮೊತ್ತ | ಕಾಮಗಾರಿ ಪೂರ್ಣ ಗೊಳಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ |
|---|---|---|---|---|---|---|
| 1 | Koppa | 2406-01-070-0-01-Roads, Bridges and Building (Maintenance -139 Major Works | Leftout works in Construction of Additional space (Room) for DCF Office at Koppa | 4,95,000 | 12,375 | 31-10-2019 |
| 2 | Koppa | | Painting, Wood work and other repair works to DCF Office at Koppa | 3,10,000 | 7,750 | 31-10-2019 |
| 3 | Koppa | | Consruction of compound wall to staff quarters at Koppa | 3,50,000 | 8,750 | 31-10-2019 |

| | | | | | | |
|---|---|---|---|---|---|---|
| 4 | Chikkagrahara | | Construction of culvert, fixing of gate, construction of compound wall in RFO Office, Chikkagrahara Range at Chikkagrahara and KEB Electricity connection charges for RFO Office. | 4,45,000 | 11,125 | 31-10-2019 |
| 5 | G.T.D, N.R.Pura | | Metalling work of Road at Govt. Timber Depot, N.R.Pura | 4,00,000 | 10,000 | 31-10-2019 |
| . | | | | | | |
| 6 | Koppa | 2406-01-070-0-05 Maintenance of Residential Quartres-200-Maintenance Expenditure | Construction of compound wall for staff quarters at Balagadi, Koppa Range | 2,00,000 | 5,000 | 31-10-2019 |
| 7 | N.R.Pura | | Repairs of N.R.Pura Range RFO Quarters at N.R.Pura N.R.Pura Rang | 4,00,000 | 10,000 | 31-10-2019 |
| 8 | Kalasa | | Repairs of maity Quarters of Indira Priyadarshini Forest guest house at Samse, Kalasa Range | 3,37,000 | 8,425 | 31-10-2019 |
| 9 | Sringeri | | Repairs of Sringeri Range RFO Quarters at Sringeri of Sringeri Range. | 2,00,000 | 5,000 | 31-10-2019 |
| 10 | Sringeri | | Repairs of Kigga Section DRFO Quarters at Kigga of Sringeri Range. | 2,00,000 | 5,000 | 31-10-2019 |
| 11 | Sringeri | | Repairs of Kigga Beat Guard Quarters at Kigga of Sringeri Range. | 2,00,000 | 5,000 | 31-10-2019 |
| 12 | Sringeri | | Repairs of Agalagandi Section DRFO Quarters at Agalagandi of Sringeri Range. | 2,50,000 | 6,250 | 31-10-2019 |
| 13 | Sringeri | | Repairs of Agalagandi Beat Guard Quarters at Agalagandi of Sringeri Range. | 2,50,000 | 6,250 | 31-10-2019 |
| 14 | Sringeri | | Construction of compound wall at staff quarters premisses at Sringer | 4,00,000 | 10,000 | 31-10-2019 |
| . | | | | | | |
| 15 | Kalasa | 2406-01-101-2-83 Tree Park | Yoga Platform at Salumarada Timmakka Tree Park, Kalasa | 1,50,000 | 3,750 | 30-11-2019 |
| 16 | Kalasa | | Providing Street Light (Including deposit to MESCOM) at Salumarada Timmakka Tree Park, Kalasa | 1,25,000 | 3,125 | 31-08-2019 |
| 17 | Kalasa | | Construction of Culverts for walking path at Salumarada Timmakka Tree Park, Kalasa | 2,00,000 | 5,000 | 31-12-2019 |
| 18 | Kalasa | | Rubble stone masonry at Salumarada Timmakka Tree Park, Kalasa | 4,59,000 | 11,475 | 31-12-2019 |
| 19 | Kalasa | | Children Play equipment at Salumarada Timmakka Tree Park, Kalasa | 3,40,000 | 8,500 | 31-12-2019 |
| 20 | Kalasa | | Watch and Ward for Salumarada Timmakka Tree Park, Kalasa | 2,39,235 | 5,980 | 31-03-2020 |
| 21 | N.R.Pura | | Yoga Platform at Suvaranavana Southikere, N.R.Pura | 1,50,000 | 3,750 | 30-11-2019 |
| 22 | N.R.Pura | | Providing Street Light (Including deposit to MESCOM) at Suvaranavana Southikere, N.R.Pura | 1,25,000 | 3,125 | 31-08-2019 |
| 23 | N.R.Pura | | Medicinal plant plot (restricted to tree crop) at Suvaranavana Southikere, N.R.Pura | 3,50,000 | 8,750 | 31-03-2020 |
| 24 | N.R.Pura | | Watch and Ward for Suvaranavana Southikere, N.R.Pura | 2,39,235 | 5,980 | 31-03-2020 |
| 25 | Koppa | | Yoga Platform at Salumarada Timmakka Tree Park, Koppa | 1,50,000 | 3,750 | 30-11-2019 |
| 26 | Koppa | | Providing Street Light (Including deposit to MESCOM) at Salumarada Timmakka Tree Park, Koppa | 1,25,000 | 3,125 | 31-08-2019 |
| 27 | Koppa | | Watch and Ward for Salumarada Timmakka Tree Park, Koppa | 2,39,235 | 5,980 | 31-03-2020 |
| . | | | | | | |

| | | | | | | |
|---|---|---|---|---|---|---|
| 28 | Koppa | 2406-01-102-1 KFDF-03 Flexi Fund 139 Major Works | Encroachment eviction and removal of coffee stumps at Sy.No 109 and 113 of Guddethota Village | 1,73,817 | 4,345 | 30-11-2019 |
| 29 | Koppa | | Encroachment eviction and removal of coffee stumps at Sy.No 74 and 78 of Devagodu village | 2,13,451 | 5,336 | 30-11-2019 |
| 30 | Koppa | | Encroachment eviction and removal of coffee stumps at Sy.No 7 of Hosur village | 1,93,157 | 4,828 | 30-11-2019 |
| 31 | Koppa | | Encroachment eviction and removal of coffee stumps at Sy.No 53, 81, 85 of Bintravalli village and 105 of Nuggi | 1,54,597 | 7,729 | 30-11-2019 |
| 32 | N.R.Pura | | Encroachment eviction and removal of coffee stumps at Sy.No 34 of Mallandur village and Sy.No 51 of Konakere village | 2,12,496 | 5,312 | 30-11-2019 |
| 33 | Chikkagrahara | | Encroachment eviction and removal of coffee stumps at Sy.No 178, 180, 199, 285 of Karkeshwara village | 4,26,664 | 10,666 | 30-11-2019 |
| 34 | Chikkagrahara | | Encroachment eviction and removal of coffee stumps at Sy.No 260 and 285 of Karkeshwara village (IBC Saragodu) | 2,64,307 | 6,607 | 30-11-2019 |
| 35 | Chikkagrahara | | Encroachment eviction and removal of coffee stumps at Sy.No 155, 156, 157, 205 of Haravari village and Sy.No 29 of Karkeshwara village (IBC Hosagadde) | 4,77,520 | 11,938 | 30-11-2019 |
| 36 | Balehonnur | | Encroachment eviction and removal of coffee stumps at Sy.No 333 of Devadana | 4,34,782 | 10,869 | 30-11-2019 |
| 37 | Sringeri | | Encroachment eviction and removal of coffee stumps at Sy.No 132 of Heggar village | 1,19,380 | 2,985 | 30-11-2019 |
| 38 | Sringeri | | Encroachment eviction and removal of coffee stumps at Sy.No 83 of Heggar Village | 1,19,380 | 2,985 | 30-11-2019 |
| 39 | Balehonnur | | Formation of CPT at Sy.No. 333 of Devadana village | 1,97,025 | 4,925 | 30-11-2019 |
| 40 | N.R.Pura | | Mansoon pitting and planting works at Sy.No 34 of Mallandur village and Sy.No 51 of Konakere village | 3,62,764 | 9,069 | 31-03-2020 |
| 41 | Chikkagrahara | | Mansoon pitting and planting works at Sy.No 260, 285 of Karkeshwara village (IBC Saragodu) | 4,51,213 | 11,280 | 31-03-2020 |
| 42 | Sringeri | | Mansoon pitting and planting works at Sy.No 132 of Heggar village | 2,03,800 | 5,095 | 31-03-2020 |
| 43 | Sringeri | | Mansoon pitting and planting works at Sy.No 83 of Heggar village | 2,03,800 | 5,095 | 31-03-2020 |
| 44 | Sringeri | | Formation of CPT at Agalagandi Sy.No 83 and 96- 2.30 Km | 3,02,105 | 7,552 | 30-11-2019 |
| 45 | Sringeri | | Formation of CPT at Heggar Sy.No 131 and 132- 1.50 Km (Attikuli Block) | 1,97,025 | 4,925 | 30-11-2019 |
| 46 | Sringeri | | Formation of CPT at Bhuvanakote Sy.No 72-2.00 Km | 2,62,700 | 6,567 | 30-11-2019 |

## –: ಷರತ್ತುಗಳು :–

1. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಟೆಂಡರ್ ಫಾರಂಗಳನ್ನು ಒಂದು ಫಾರಂ ಚಾಲ್ತಿಯಲ್ಲಿರುವ ಬೆಲೆ ಹಾಗೂ ಎಲ್ಲಾ ತೆರಿಗೆ ಪಾವತಿಸಿ ದಿನಾಂಕ:**29–07–2019** ಪೂರ್ವಾಹ್ನ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಈ ಕಛೇರಿಯಲ್ಲಿ ಪಡೆಯಬಹುದು. ಸದರಿ ಟೆಂಡರ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ದಿನಾಂಕ: **31–06–2019** ರಂದು ನಡೆಯುವ ಮರುಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು.
2. ಟೆಂಡರ್ ಹಾಕಲು ಇಚ್ಚಿಸುವ ಗುತ್ತಿಗೆದಾರರು ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಟೆಂಡರ್ ಹಾಕಲು ಇಚ್ಚಿಸಿದಲ್ಲಿ ಒಂದೇ ತಾಂತ್ರಿಕ ಬಿಡ್‌ನ್ನು ಹಾಕುವುದು. ಆದರೆ ಆರ್ಥಿಕ ಬಿಡ್‌ನ್ನು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

**3. _ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:–**

1. ಕೊಪ್ಪ ಅರಣ್ಯ ವಿಭಾಗದಲ್ಲಿ 2019–20 ನೇ ಸಾಲಿಗೆ ಗುತ್ತಿಗೆದಾರರೆಂದು ನೋಂದಣಿಯಾಗಿರುವ ದೃಢೀಕೃತ ಪತ್ರ.
2. ಲೋಕೋಪಯೋಗಿ ಇಲಾಖೆಯಲ್ಲಿ ದರ್ಜೆ–2 (ಅಟಛೆ–ಖಖ) ಮತ್ತು ಅದಕ್ಕಿಂತ ಮೇಲುದರ್ಜೆ ಗುತ್ತಿಗೆದಾರರೆಂದು ನೋಂದಣಿಯಾಗಿರುವ ದೃಢೀಕೃತ ಪತ್ರ. (ಜಾನುವಾರು ನಿರೋಧಕ ಕಂದಕ, ಒತ್ತುವರಿ ತೆರವು ಕಾಮಗಾರಿ ಮತ್ತು ಮಾನ್ಸೂನ್ ಪಿಟ್ಟಿಂಗ್ ಕಾಮಗಾರಿಗೆ ಹೊರತುಪಡಿಸಿ)
3. ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ರೂ. 5.00 ಲಕ್ಷಕ್ಕಿಂತಲೂ ಅಧಿಕ ಮೊತ್ತದ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರ.
4. ಆದಾಯ ತೆರಿಗೆ 1961ರ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಪಡೆದ ಖಿಂಟ/ಕಂಟ ನಂಬರ್ ಧೃಡೀಕೃತ ಪ್ರತಿ ಮತ್ತು ಕ್ಲೀಯರೆನ್ಸ್ ಸರ್ಟಿಫೀಕೇಟ್ ಪ್ರತಿ.
5. ಉಖಖಿ ಯಲ್ಲಿ ನೋಂಣಿಯಾಗಿರುವ ದೃಢೀಕೃತ ಪತ್ರ.
6. ತಹಸೀಲ್ದಾರರು ನೀಡುವ ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ (ಸಾಲ್ವೆನ್ಸಿ ಸರ್ಟಿಫೀಕೇಟ್).
7. ಟೆಂಡರ್‌ದಾರರು ಅವರ ಪೂರ್ತಿ ಹೆಸರು, ಸರಿಯಾದ ಅಂಚೆ ವಿಳಾಸ ಎಲ್ಲಾ ರೀತಿಯ ಪೂರ್ಣ ಮಾಹಿತಿಗಳನ್ನು ಒಳಗೊಂಡ ಯಾವುದಾದರೂ ಗುರುತಿನ ಚೀಟಿಯ ಪ್ರತಿ.

4. ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್‌ನಲ್ಲಿರುವ ಷರತ್ತುಗಳು ಯಶಸ್ವಿಯಾದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆಗೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

5. ಮೇಲಿನ ಘಟಕಗಳಿಗೆ ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರುದಾರರು ಪ್ರತಿ ಘಟಕಕ್ಕೆ ಸಂಬಂಧಿಸಿದಂತೆ ಟೆಂಡರ್ ಫಾರಂ ಸಂಪೂರ್ಣವಾಗಿ ಭರ್ತಿ ಮಾಡಿ ರುಜು ಮಾಡಿ ಪ್ರತಿ ಘಟಕಗಳಿಗೆ ಪ್ರತ್ಯೇಕವಾಗಿ ಲಕೋಟೆಯಲ್ಲಿ ಇಟ್ಟು, ಲಕೋಟೆ ಮೇಲೆ ಘಟಕದ ಸಂಖ್ಯೆ ಮತ್ತು ಕಾಮಗಾರಿ ವಿವರಗಳನ್ನು ಸ್ಪಷ್ಟ ಹಾಗೂ ನಿಖರವಾಗಿ ನಮೂದಿಸಿ, ಟೆಂಡರುದಾರರ ವಿಳಾಸ ನಮೂದಿಸಿ, ಮೊಹರು ಮಾಡಿ ಟೆಂಡರ್ ಬಾಕ್ಸ್‌ನಲ್ಲಿ ಮಧ್ಯಾಹ್ನ 3:00 ಗಂಟೆಯ ಒಳಗೆ ಹಾಕತಕ್ಕದ್ದು.

6. ಟೆಂಡರಿನ ಅಂದಾಜು ಮೊಬಲಗಿನ ಮೇಲೆ ಅನುಸೂಚಿಯಲ್ಲಿ ನಮೂದಿಸಿರುವಂತೆ ಮುಂಗಡ ಠೇವಣಿ (ಇ.ಎಂ.ಡಿ) ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ವಿಭಾಗ, ಕೊಪ್ಪ ಇವರ ಹೆಸರಿನಲ್ಲಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ.ಯನ್ನು ಕೊಪ್ಪದಲ್ಲಿ ಪಾವತಿಯಾಗುವಂತೆ ಪಡೆದು ಬಿಡ್ ಟೆಂಡರ್ ಫಾರಂನೊಂದಿಗೆ ಲಗತ್ತಿಸತಕ್ಕದ್ದು, ಮುಂಗಡ ಠೇವಣಿ ಹಣದ ಡಿಡಿಯನ್ನು ಲಗತ್ತಿಸದೇ ಇರುವ ಟೆಂಡರವನ್ನು ತಿರಸ್ಕರಿಸಲಾಗುವುದು.

7. **ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ದರವನ್ನು ನಮೂದಿಸುವಾಗ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ದರದ ಮೇಲೆ ಶೇಕಡವಾರು ಇಷ್ಟು ಹೆಚ್ಚು ಅಥವಾ ಕಡಿಮೆ ಎಂದು ದರವನ್ನು ಸ್ಪಷ್ಟವಾಗಿ ಅಂಕೆ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕು.**

8. ಕಾಮಗಾರಿ ಕೆಲಸವು ಅಂದಾಜಿನದಾಗಿದ್ದು, ಮೇಲ್ಕಂಡ ಕೆಲಸಗಳನ್ನು ಅನುದಾನಕ್ಕೆ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಪರಿಷ್ಕರಿಸುವ ಅಧಿಕಾರ ಈ ಕೆಳಸಹಿದಾರರಿಗೆ ಇರುತ್ತದೆ. ಮುಂದುವರಿದು ಒತ್ತುವರಿ ತೆರವು ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳು ಪೂರ್ಣಗೊಂಡಿದ್ದು ಅಂತಹ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಆದೇಶ ನೀಡಲಾಗುವುದು. ಮಾನ್ಸೂನ್ ಪಿಟ್ಟಿಂಗ್ ಮತ್ತು ಪ್ಲಾಂಟಿಂಗ್ ಕಾಮಗಾರಿಯು ಋತುಮಾನಕ್ಕನುಗುಣವಾಗಿ ನಡೆಸಬೇಕಾದ ಕಾಮಗಾರಿಗಳಾಗಿದ್ದು ಇದರಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳನ್ನು ಹೊರತುಪಡಿಸಿ ಬಾಕಿ ಉಳಿದ ಕಾಮಗಾರಿಗಳಿಗೆ ಆದೇಶ ನೀಡಲಾಗುವುದು.

9. ಮೇಲ್ಕಂಡ ಕಾಮಗಾರಿಗಳ ಮೊತ್ತವು ಅಂದಾಜಿನದಾಗಿದ್ದು, ಈ ಮೊತ್ತವು ಕೇಂದ್ರ ಕಛೇರಿಯಿಂದ ಒಂದು ವೇಳೆ ಹೆಚ್ಚು ಅಥವಾ ಕಡಿಮೆಯಾಗಬಹುದು. ಈ ಪರಿಸ್ಥಿತಿಗೆ ಅನುಗುಣವಾಗಿ ಯಶಸ್ವಿ ಬಿಡ್ಡುದಾರರು ಮಂಜೂರಾದ ಟೆಂಡರ್ ದರಕ್ಕೆ ಅನ್ವಯವಾಗುವಂತೆ ಕೆಲಸ ನಿರ್ವಹಿಸಲು ಬದ್ದರಿರಬೇಕು. ಒಂದು ವೇಳೆ ಕಡಿಮೆ ಕೆಲಸವಾದಲ್ಲಿ ಇಲಾಖೆಯು ಯಾವುದೇ ಪರಿಹಾರ ನೀಡುವುದಿಲ್ಲ ಆಡಳಿತಾತ್ಮಕ ಕಾರಣಗಳಿಂದ ಕೆಲಸವನ್ನು ಸ್ಥಗಿತಗೊಳಿಸಿದರೆ ಅದನ್ನು ಸ್ವೀಕರಿಸುವ ಬಾಧ್ಯತೆ ಟೆಂಡರುದಾರರ ಮೇಲಿರುತ್ತದೆ.

10. ಟೆಂಡರ್‌ನ ವಿಷಯದಲ್ಲಿ ಯಾವುದೇ ರೀತಿಯ ವಿವಾದ ಉಂಟಾದಲ್ಲಿ, ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ಇವರು ಅಫೀಲು ಅಧಿಕಾರಿಗಳಾಗಿದ್ದು, ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು ಚಿಕ್ಕಮಗಳೂರು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಡುತ್ತದೆ.

11. ಕೆಲಸವನ್ನು ಟೆಂಡರ್ ಇತ್ಯರ್ಥವಾದ 07 ದಿನಗಳೊಳಗಾಗಿ ಟೆಂಡರ್ ಕರಾರು ಮಾಡಿಕೊಂಡು, ಕಾರ್ಯಾದೇಶ ಪಡೆದುಕೊಂಡು ನಿಗದಿತ ದಿನಗಳೊಳಗೆ ಕೆಲಸ ಪೂರ್ಣಗೊಳಿಸಿ ಅಂತಿಮ ವರದಿ ನೀಡುವುದು.

12. ಯಾವುದೇ ಕಾರಣದಿಂದ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ. ಒಂದು ವೇಳೆ ನಿಗಧಿತ ಕಾಲಾವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಕೊಪ್ಪ ಇವರು ವಿಧಿಸುವ ದಂಡಕ್ಕೆ ಬದ್ಧರಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಗಳಿಂದ ಲಿಖಿತ ಕಾಲ ವಿಸ್ತರಣೆ ಆದೇಶ ಪಡೆದುಕೊಳ್ಳತಕ್ಕದ್ದು. ಒಂದು ವೇಳೆ ಕಾಲ ವಿಸ್ತರಿಸಬೇಕಾದ ಅನಿವಾರ್ಯತೆ ಕುರಿತು ಸಮರ್ಥಿಸಿದ್ದಲ್ಲಿ, ಮೊದಲ ಬಾರಿಗೆ ಕಾಲವಿಸ್ತರಣಾ ಶುಲ್ಕ ಮತ್ತು ದಂಡ ರೂ.1,000/– ಹಾಕಿ ಕನಿಷ್ಠ ಅವಧಿಗೆ ಮಾತ್ರ ವಿಸ್ತರಿಸಲಾಗುವುದು.

13. ಭಾಗಶಃ ಕೆಲಸ/ಅಪೂರ್ಣ ಕಾಮಗಾರಿ ಮಾಡಿದ ಸಂದರ್ಭದಲ್ಲಿ ಅಂತಹ ಭಾಗಶಃ/ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡುವುದಿಲ್ಲ. ಅಲ್ಲದೆ ಟೆಂಡರುದಾರರ ಸ್ವಜವಾಬ್ದಾರಿಯ ಮೇಲೆ ಇಂತಹ ಭಾಗಶಃ ಕೆಲಸ/ಅಪೂರ್ಣ ಕಾಮಗಾರಿಯನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು. ಅಲ್ಲದೆ ಈ ರೀತಿಯ ಕಾಮಗಾರಿಗಳನ್ನು ಎರಡನೇಯ ಗುತ್ತಿಗೆದಾರನಿಂದ ಅನುಷ್ಠಾನಗೊಳಿಸುವ

ಸಂದರ್ಭದಲ್ಲಿ ಮೊದಲನೇ ಗುತ್ತಿಗೆದಾರನು ನಮೂದಿಸಿದ ದರಕ್ಕಿಂತ ಹೆಚ್ಚುವರಿ ದರವು ನಮೂದಾದಲ್ಲಿ ಈ ವ್ಯತ್ಯಾಸದ ಮೊತ್ತವನ್ನು ಮೊದಲನೇಯ ಗುತ್ತಿಗೆದಾರನಿಂದ ವಸೂಲಿ ಮಾಡಿಕೊಳ್ಳಲಾಗುವುದು ಮತ್ತು ಮೊದಲನೇ ಗುತ್ತಿಗೆದಾರರ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಒಂದು ವೇಳೆ ಕಡಿಮೆ ದರವು ನಮೂದಾದಲ್ಲಿ ವ್ಯತ್ಯಾಸದ ಮೊತ್ತವನ್ನು ಮೊದಲನೇಯ ಗುತ್ತಿಗೆದಾರನಿಗೆ ಪಾವತಿಸಲಾಗುವುದಿಲ್ಲ.

14. ಗುತ್ತಿಗೆದಾರರ ಎಲ್ಲಾ ಕಾಮಗಾರಿ ಬಿಲ್ಲುಗಳ ಒಟ್ಟು ಮೊತ್ತದಲ್ಲಿ ನಿಯಮಾನುಸಾರ ಚಾಲ್ತಿಯಲ್ಲಿರುವ ಆದಾಯ ತೆರಿಗೆ ಹಾಗೂ ಇತರೆ ತೆರಿಗೆಗಳನ್ನು ಕಡಿತಗೊಳಿಸಲಾಗುವುದು. ಕಾಮಗಾರಿಗಳು ಸಮಾಧಾನಕರವಾಗಿ ಪೂರ್ತಿಯಾಗಿ ಪೂರೈಸಿರುವ ಬಗ್ಗೆ ಕಾಮಗಾರಿಯ ಅಂತಿಮ ವರದಿ ಬಂದ ಮೇಲೆ ಇಎಂಡಿ ಯನ್ನು ಬಿಡುಗಡೆ ಮಾಡಲಾಗುವುದು.
15. ಯಶಸ್ವಿ ಟೆಂಡರ್‌ದಾರರು ಈ ಕಛೇರಿಯಿಂದ ಹೊರಡಿಸುವ ಸವಿಸ್ತಾರ ಟೆಂಡರ್ ಪ್ರಕಟಣೆಯ ಎಲ್ಲಾ ಷರತ್ತುಗಳಿಗೆ ಬದ್ದರಾಗಿರಬೇಕು.
16. ಯಶಸ್ವಿ ಟೆಂಡರ್‌ದಾರರು 7 ದಿನಗಳ ಒಳಗೆ ಸದರಿ ಕಾಮಗಾರಿ ನಿರ್ವಹಿಸಲು ಒಟ್ಟು ಕಾಮಗಾರಿ ಮೊತ್ತದ ಶೇ.5 ರಷ್ಟು ಭದ್ರತಾ ಠೇವಣಿ ಮೊತ್ತವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೊಪ್ಪ ವಿಭಾಗ, ಕೊಪ್ಪ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಡಿ.ಡಿ/ಬ್ಯಾಂಕ್ ಗ್ಯಾರಂಟಿ ಮುಖಾಂತರ ಸಲ್ಲಿಸಿ ರೂ.100/– (ಒಂದು ನೂರು ಮಾತ್ರ)ರ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದವನ್ನು ಈ ಕೆಳಸಹಿದಾರರ ಸಮ್ಮುಖದಲ್ಲಿ ಮಾಡಿಕೊಳ್ಳತಕ್ಕದ್ದು ಹಾಗೂ ಕೆಲಸದ ಆದೇಶವನ್ನು ಪಡೆಯತಕ್ಕದ್ದು. ಇ.ಎಂ.ಡಿ ಮೊತ್ತವನ್ನು ಭಾಗಶಃ ಭದ್ರಾ ಠೇವಣಿ ಮೊತ್ತಕ್ಕೆ ಪರಿವರ್ತಿಸಿಕೊಳ್ಳಲಾಗುವುದು. ಭದ್ರತಾ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.
17. **ನಿಗಧಿತ ಕಾಮಗಾರಿಗಳನ್ನು ನಿಬಂಧನೆಗೆ ಹಾಗೂ ಅಂದಾಜು ಪಟ್ಟಿಗೆ ಅನುಗುಣವಾಗಿ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ ನಂತರವೇ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಯಾವುದೇ ಕಾರಣಕ್ಕೂ ಸದರಿ ಕಾಮಗಾರಿಗೆ ಮುಂಗಡ ಹಣ ನೀಡಲಾಗುವುದಿಲ್ಲ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.**
18. ಟೆಂಡರ್ ಪ್ರಕಟಣೆಯ ಷರತ್ತಿನ ಯಾವುದೇ ನಿಯಮವನ್ನು ಉಲ್ಲಂಘಿಸಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಇ.ಎಂ.ಡಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸದರಿ ಕಾಮಗಾರಿಯನ್ನು ಮರು–ಟೆಂಡರ್ ಮಾಡಲಾಗುವುದು. ಈ ರೀತಿಯ ಕಾಮಗಾರಿಗಳನ್ನು ಎರಡನೇಯ ಗುತ್ತಿಗೆದಾರನಿಂದ ಅನುಷ್ಟಾನಗೊಳಿಸುವ ಸಂದರ್ಭದಲ್ಲಿ ಮೊದಲನೇ ಗುತ್ತಿಗೆದಾರನು ನಮೂದಿಸಿದ ದರಕ್ಕಿಂತ ಹೆಚ್ಚು ದರವು ನಮೂದಾದಲ್ಲಿ ಈ ವ್ಯತ್ಯಾಸದ ಮೊತ್ತವನ್ನು ಮೊದಲನೇಯ ಗುತ್ತಿಗೆದಾರನಿಂದ ವಸೂಲಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಕಡಿಮೆ ದರವು ನಮೂದಾದಲ್ಲಿ ವ್ಯತ್ಯಾಸದ ಮೊತ್ತವನ್ನು ಮೊದಲನೇಯ ಗುತ್ತಿಗೆದಾರನಿಗೆ ಪಾವತಿಸಲಾಗುವುದಿಲ್ಲ.
19. ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ಸಲಕರಣೆಗಳನ್ನು ಕಾಮಗಾರಿ ಸ್ಥಳಕ್ಕೆ ಸಾಗಾಣಿಕೆ ವ್ಯವಸ್ಥೆಯನ್ನು ಅವರೇ ಸ್ವಂತವಾಗಿ ಮಾಡಿಕೊಳ್ಳತಕ್ಕದ್ದು. ಇಂಧನ ಬೆಲೆ ಹೆಚ್ಚಾದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುವುದಿಲ್ಲ.
20. ಎಲ್ಲಾ ಕೆಲಸಗಳು ಆಗಿಂದಾಗ್ಯೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ವಲಯ ಅರಣ್ಯಾಧಿಕಾರಿಗಳಿಂದ ಅಳತೆ ಮಾಡಿಸಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಅಳತೆ ಪುಸ್ತಕದೊಂದಿಗೆ(ಎಂ.ಬಿ) ಒಪ್ಪಿಸತಕ್ಕದ್ದು. ಬಿಲ್ಲು ಸಂದಾಯ ಮಾಡುವಾಗ ಸದರಿ ಬಿಲ್ಲುಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆ ಮತ್ತು ಆಗಿಂದಾಗ್ಯೆ ಬದಲಾಗುವ ತೆರಿಗೆಗಳ ಮೊತ್ತವನ್ನು ಕಡಿತಗೊಳಿಸಲಾಗುವುದು.
21. ಈಗ ಸೂಚಿಸಿದ ಕಾಮಗಾರಿಗಳು, ದರಗಳು ತಾತ್ಕಾಲಿಕವಾಗಿದ್ದು ಕೆಲವು ಕಾಮಗಾರಿಗಳ ಅಂದಾಜು ಪಟ್ಟಿ ಮಂಜೂರಾದ ನಂತರ ನಿಖರವಾದ ಕಾಮಗಾರಿ ಮತ್ತು ದರವನ್ನು ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡುವ ಅವಧಿಯಲ್ಲಿ ತಿಳಿಸಲಾಗುವುದು.
22. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ, ಮತ್ತಿತರ ಕ್ಷೇಮ ಸೌಲಭ್ಯಗಳನ್ನು ಸ್ವತಃ ಗುತ್ತಿಗೆದಾರರೇ ಭರಿಸಲು ಜವಾಬ್ದಾರರಾಗತಕ್ಕದ್ದು. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿಕಾರ್ಮಿಕರಿಗೆ ಅಪಘಾತ, ಇನ್ನಿತರೆ ಹಾನಿಗಳು ಸದರಿ ಕಾಮಗಾರಿ ಅವಧಿಯಲ್ಲಿ ಸಂಭವಿಸಿದ್ದಲ್ಲಿ ಗುತ್ತಿಗೆದಾರರೇ ಪರಿಹಾರ ನೀಡಲು ಬದ್ಧರಾಗಿರತಕ್ಕದ್ದು. ಇಲಾಖೆಯಿಂದ ಯಾವುದೇ ಪರಿಹಾರ ಮೊತ್ತ ನೀಡಲಾಗುವುದಿಲ್ಲ.
23. ಯಶಸ್ವಿಯಾದ ಟೆಂಡರುದಾರರು ಕರಾರುನಾಮೆಯನ್ನು ಸಹಿ ಮಾಡಿದ ನಂತರ ಟೆಂಡರನ್ನು ಹಿಂತೆಗೆದುಕೊಂಡಲ್ಲಿ ಅಥವಾ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದೇ ಇದ್ದಲ್ಲಿ ಅಥವಾ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಟೆಂಡರುದಾರರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ, ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರುಟೆಂಡರ್ ಮಾಡಲಾಗುವುದು. ಟೆಂಡರಿಗೆ ಕಾಲಾವಕಾಶ ಇಲ್ಲದಿದ್ದಲ್ಲಿ, ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963ರ ಕಲಂ 109 ಮತ್ತು 119ರಂತೆ ಭೂ ಕಂದಾಯ ನಿಯಮದನ್ವಯ ವಸೂಲಿ ಮಾಡಲಾಗುವುದು.
24. ಗುತ್ತಿಗೆದಾರರು ಅಥವಾ ಅವರಿಂದ ನೇಮಿಸಲ್ಪಟ್ಟವರಿಂದ ಸದರಿ ಗುತ್ತಿಗೆ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಉಂಟಾದಲ್ಲಿ ಅದಕ್ಕೆ ಗುತ್ತಿಗೆದಾರರೇ ಬಾಧ್ಯಸ್ಥರಾಗಿರತಕ್ಕದ್ದು.
25. ಸದರಿ ಗುತ್ತಿಗೆದಾರರು/ಅವರಿಂದ ನೇಮಿಸಲ್ಪಟ್ಟ ಸೂಪರ್‌ವೈಸರ್/ಏಜೆಂಟ್‌ರವರು ಕಾಮಗಾರಿ ನಿರ್ವಹಿಸುವಾಗ ವಲಯ ಅರಣ್ಯಾಧಿಕಾರಿ ಅಥವಾ ಅವರಿಂದ ನೇಮಿಸಲ್ಪಟ್ಟ ಸಿಬ್ಬಂದಿಗಳು ಸದರಿ ಕೆಲಸವನ್ನು ಆಗಾಗ್ಗೆ ತಪಾಸಣೆ/ಪರಿಶೀಲಿಸಲು ಬಂದಾಗ ಸಹಕರಿಸತಕ್ಕದ್ದು ಹಾಗೂ ಅವರ ಸಲಹೆ ಸೂಚನೆಗಳನ್ನು ಪಾಲಿಸತಕ್ಕದ್ದು.

26. ಗುತ್ತಿಗೆದಾರರು ಅವರ ಪರವಾಗಿ ಸದರಿ ಕೆಲಸ ಮೇಲ್ವಿಚಾರಣೆ ಮಾಡಲು ಯಾರಾದರನ್ನಾದರೂ ನೇಮಿಸಲು ಇಚ್ಚಿಸಿದ್ದಲ್ಲಿ ಅಂತಹವರ ಬಯೋಡಾಟಾ ಈ ಕಛೇರಿಗೆ ಸಲ್ಲಿಸಿ, ದೃಢೀಕರಣ ಪತ್ರ ಪಡೆಯತಕ್ಕದ್ದು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ವಲಯ ಅರಣ್ಯಾಧಿಕಾರಿ ಅಥವಾ ಅವರಿಂದ ನೇಮಿಸಲ್ಪಟ್ಟ ಸಿಬ್ಬಂದಿಗಳ ಪರಿಶೀಲನೆಗೆ ಒಪ್ಪಿಸತಕ್ಕದ್ದು.
27. ಕಾಲಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೊಪ್ಪ ವಿಭಾಗ, ಕೊಪ್ಪ ಇವರು ವಿಧಿಸುವ ಷರತ್ತಿಗೆ ಗುತ್ತಿಗೆದಾರರು ಬದ್ಧರಾಗಿರಬೇಕು.
28. ಈ ಮೇಲ್ಕಂಡ ಷರತ್ತುಗಳಲ್ಲದೇ ವಿವರವಾದ ಷರತ್ತುಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಉಪ ಅರಣ್ಯ ಸಂರಕ್ಷಣಾಧಿಕಾರಿ,**
ಕೊಪ್ಪ ವಿಭಾಗ, ಕೊಪ್ಪ